# ವೆಂಕಟರಾಮ್ 87



'ರಾಜಕೀಯ ಸ್ಥಿತಿ ಏನು, ಹೇಗೆ ಎಂಬುದು ಯಾರೂ ಊಹಿಸಲಾಗದ ವಿಷಯ. ದೇಶ ಹೋಗುತ್ತಿರುವ ಸ್ಥಿತಿ ಭಯಂಕರವಾಗಿದೆ. ಬೆಲೆ ಇಳಿಕೆ ಆಗಿರಬಹುದು. ಆದರೆ ಜನರನ್ನು ವಿಚಾರಣೆ ಇಲ್ಲದೆ, ಆಪಾದನೆ ಇಲ್ಲದೆ, ಕಾಲದ ಮಿತಿಯಿಲ್ಲದೆ, ಸರ್ಕಾರ ಜೈಲಿನಲ್ಲಿಡುವ ಪರಿಸ್ಥಿತಿ ಮುಂದುವರಿದರೆ ಯಾರ ಭವಿಷ್ಯವೂ ಕ್ಷೇಮವಲ್ಲ. ನಮ್ಮ ಬಿಡುಗಡೆ ಇವತ್ತಲ್ಲ, ನಾಳೆ ಆಗುತ್ತೆ. ಅದರ ಬಗ್ಗೆ ಅಷ್ಟೇನು ಚಿಂತೆಯಿಲ್ಲ. ಆದರೂ ದೇಶದ ಭವಿಷ್ಯದ ಬಗ್ಗೆ ಚಿಂತೆ ಕಾಡುತ್ತಿದೆ. ಈ ಕಾರ್ಗತ್ತಲೆಯಿಂದ ಉಷಾಃಕಾಲ ಬರುತ್ತದೆಂದು ನಂಬಿಕೆಯಿದೆ'.

ಇದು ನನ್ನ ತಂದೆ, ಹಿರಿಯ ಸಮಾಜವಾದಿ, ಕಾರ್ಮಿಕ ನಾಯಕ ಎಸ್.ವೆಂಕಟರಾಮ್ ಮಾರ್ಚ್ 1976ರಲ್ಲಿ ಬೆಂಗಳೂರಿನ ಸೆಂಟ್ರಲ್ ಜೈಲಿನಿಂದ ಬರೆದ ಪತ್ರದ ಸಾರಾಂಶ.

ವೆಂಕಟರಾಮ್ ಅವರು ಸಮಾಜದ ಒಳಿತಿಗಾಗಿ, ಪರಿವರ್ತನೆಗಾಗಿ ನಡೆಸಿದ ರಾಜಕೀಯ ಮತ್ತು ಕಾರ್ಮಿಕ ಹೋರಾಟ, ಸತ್ಯಾಗ್ರಹ, ಜೈಲುವಾಸ ಅವರ ಸಾರ್ವಜನಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು.

ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು 1975 ಜೂನ್ 26ರಂದು ತಮ್ಮ ಸ್ವಹಿತಕ್ಕಾಗಿ ಘೋಷಿಸಿದ ತುರ್ತು ಪರಿಸ್ಥಿತಿಯ ಮೊದಲು ಮತ್ತು ಅದರ ವಿರುದ್ಧ ಲೋಕನಾಯಕ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ರಾಜಕೀಯ ನಾಯಕರುಗಳು, ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ನಡೆಸಿದ ಹೋರಾಟ ಭಾರತದ ಇತಿಹಾಸದ 'ಎರಡನೇ ಸ್ವಾತಂತ್ರ ಸಂಗ್ರಾಮ' ಎಂದರೆ ತಪ್ಪಾಗಲಾರದು. ಆ ದಿನಗಳಲ್ಲಿ ದೇಶಕ್ಕಾಗಿ ನಿಸ್ವಾರ್ಥವಾಗಿ ಹೋರಾಡಲು ವೆಂಕಟರಾಮ್ ಅವರಂತ ರಾಜಕೀಯ ನಾಯಕರುಗಳಿದ್ದರು; ಅವರಿಗೆ ಬೆಂಬಲವಾಗಿ ಲಕ್ಷಾಂತರ ಕಾರ್ಯಕರ್ತರೂ, ಕಾರ್ಮಿಕರೂ, ರೈತರೂ ಇದ್ದರು.

ಈಗ ದೇಶಾಭಿಮಾನವಿಲ್ಲದೆ, ಸೇವಾ ಮನೋಭಾವವಿಲ್ಲದೆ, ರಾಜಕೀಯ ವ್ಯಾಪಾರವಾಗಿ, ಭ್ರಷ್ಟಾಚಾರ ಮುಗಿಲಿಗೆದ್ದಿದೆ. ಏರುತ್ತಿರುವ ಬೆಲೆ, ಜಾಗತೀಕರಣದ ಸಮಸ್ಯೆಗಳು ಇತ್ಯಾದಿಗಳಿಂದ ಎಲ್ಲಾ ಪ್ರದೇಶಗಳ, ಎಲ್ಲಾ ವರ್ಗಗಳ ಜನತೆ ಹತಾಶರಾಗಿದ್ದಾರೆ. ದೇಶದ ಸ್ಥಿತಿ ಅಂದಿಗಿಂತ ಇಂದು ಹೆಚ್ಚು ಭಯಂಕರವಾಗಿರುವ ಈ ಹಿನ್ನೆಲೆಯಲ್ಲಿ ವೆಂಕಟರಾಮ್‌ರವರಂತ ನಾಯಕರಿಲ್ಲದಿರುವುದು ವಿಷಾದದ ಸಂಗತಿ.

ರಾಜಕೀಯ ಭ್ರಷ್ಟಾಚಾರದ ವಿರುದ್ಧ ನಾಗರಿಕ ಸಮಾಜ ಸಿಡಿದೆದ್ದಿದೆ. ಆದರೆ, ಭೂತಾಕಾರವಾಗಿ ಕಾಣುತ್ತಿರುವ ಭ್ರಷ್ಟಾಚಾರ ನಮ್ಮ ದೇಶದ ಸಮಸ್ಯೆಗಳಲ್ಲೊಂದು ಮಾತ್ರ. ಜಾಗತೀಕರಣದಿಂದ ಹಲವಾರು ವಲಯಗಳಲ್ಲಿ ಪ್ರಗತಿಯಾಗಿದೆ ಎನ್ನಲು ಸ್ಪಷ್ಟೀಕರಣಗಳನ್ನು ನೀಡಬಹುದು. ಆದರೆ ಜಾಗತೀಕರಣವನ್ನು ನಮ್ಮ ಪರಿಸ್ಥಿತಿಗೆ ಸರಿಯಾಗಿ ಅಳವಡಿಸಿಕೊಳ್ಳದೆ ಆಗಿರುವ ದುಷ್ಪರಿಣಾಮಗಳನ್ನೂ ಗಮನಿಸಬೇಕು.

ಇದಕ್ಕೆ ಜಾಗತೀಕರಣದ ರೂಪರೇಷೆಗಳು ಮಾತ್ರ ಕಾರಣವಲ್ಲ; ಅದಕ್ಕೂ ಹೆಚ್ಚಾಗಿ ರಾಜಕೀಯ ಮತ್ತು ಆಡಳಿತದ ದೌರ್ಬಲ್ಯಗಳು ಕಾರಣ. ಮುಖ್ಯವಾಗಿ, ನಮ್ಮ ಎಲ್ಲಾ ಸಮಸ್ಯೆಗಳಿಗೂ ರಾಜಕೀಯ ಭ್ರಷ್ಟಾಚಾರವೇ ಕಾರಣವೆಂದು ಗ್ರಹಿಸಲಾಗದು. ಈ ನಿಟ್ಟಿನಲ್ಲಿ ಖಾಸಗಿ ವಲಯ ಮತ್ತು ಕಾರ್ಯಾಂಗಗಳಲ್ಲಿನ ಭ್ರಷ್ಟಾಚಾರದ ಪರಿಮಾಣ, ರಾಜಕೀಯ ವಲಯಕ್ಕಿಂತಲೂ ಬೃಹತ್ ಪ್ರಮಾಣದ್ದೆಂದು ನಾವು ಗುರುತಿಸಬೇಕು. ಸಂತೋಷದ ಸಂಗತಿಯೇನೆಂದರೆ, ಯುವಜನಾಂಗ, ಮಹಿಳೆಯರೂ ಸೇರಿದಂತೆ ಮಧ್ಯಮವರ್ಗದ ಜನತೆ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಸ್ವಯಂಪ್ರೇರಿತರಾಗಿ ಭಾಗಿಯಾಗಿದ್ದಾರೆ.

ತುರ್ತು ಪರಿಸ್ಥಿತಿ ಮತ್ತಿತರ ಹೋರಾಟಗಳ ಹಿನ್ನೆಲೆಯಿಂದ ಬಂದಿರುವ ಪ್ರಾಮಾಣಿಕ ರಾಜಕಾರಣಿಗಳು ಪಕ್ಷ ರಾಜಕಾರಣದಿಂದ ಹೊರಬಂದು, ನಾಗರಿಕ ಸಮಾಜದ ಹೋರಾಟದಲ್ಲಿ ಕೈಗೂಡಿಸಬೇಕು. ಭ್ರಷ್ಟಾಚಾರಿಗಳ ವಿರುದ್ಧದ ಎಲ್ಲಾ ನೈತಿಕ ಶಕ್ತಿಗಳನ್ನು ಕೇಂದ್ರೀಕರಿಸಿ, ಒಂದು ಹೊಸ ಕ್ರಾಂತಿಯನ್ನು ಹುಟ್ಟುಹಾಕಬೇಕು. ಇದು ನಮ್ಮೆಲ್ಲರ ಕರ್ತವ್ಯ ಮತ್ತು ಜವಾಬ್ದಾರಿಯಷ್ಟೇ ಅಲ್ಲ; ಸ್ವಾತಂತ್ರದ ರೂವಾರಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೂ, ಅದೇ ಸ್ವಾತಂತ್ರವನ್ನು ನಮ್ಮವರಿಂದಲೇ ಸಂರಕ್ಷಿಸಿದ ಹೋರಾಟಗಳ ರೂವಾರಿ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರಿಗೂ ನಾವು ತೋರಿಸಬೇಕಾದ ಗೌರವ.

**ಪ್ರದೀಪ್ ವೆಂಕಟರಾಮ್**

## ಸಮಾಜವಾದಿಗಳ ಕೊಡುಗೆ

ಕನ್ನಡ ಸಂಘರ್ಷ ಸಮಿತಿ ಮತ್ತು ಎಸ್.ವೆಂಕಟರಾಮ್ ಸ್ಮಾರಕ ಟ್ರಸ್ಟ್: ಭಾನುವಾರ ಸಮಾಜವಾದಿ ನಾಯಕ, ಕಾರ್ಮಿಕ ಮುಖಂಡ, ಮಾಜಿ ಎಂಎಲ್‌ಸಿ ದಿ. ಎಸ್. ವೆಂಕಟರಾಮ್ ಅವರ 87ನೇ ಜನ್ಮದಿನ. 'ಕರ್ನಾಟಕದ ಪ್ರಗತಿಗೆ ಸಮಾಜವಾದಿಗಳ ಕೊಡುಗೆ' ಕುರಿತು ಉಪನ್ಯಾಸದಲ್ಲಿ ಎಸ್.ಆರ್. ವಿಜಯಶಂಕರ್ (ದಿ. ಎಸ್. ವೆಂಕಟರಾಮ್ ಅವರ ಬಗ್ಗೆ), ಕಾಗೋಡು ತಿಮ್ಮಪ್ಪ (ದಿ. ಶಾಂತವೇರಿ ಗೋಪಾಲಗೌಡ), ಬಿ.ಎಲ್. ಶಂಕರ್ (ದಿ. ಜೆ.ಎಚ್. ಪಟೇಲ್), ಪಿ.ಜಿ.ಆರ್. ಸಿಂಧ್ಯ (ದಿ. ಎಂ.ಪಿ. ಪ್ರಕಾಶ್). ಪ್ರಸ್ತಾವನೆ: ರಾಮಣ್ಣ ಕೋಡಿಹೊಸಳ್ಳಿ. ನಂತರ ಕನ್ನಡ ಗೀತೆಗಳ ಗಾಯನದಲ್ಲಿ: ಕೋ ವೆಂ ರಾಮಕೃಷ್ಣಗೌಡ, ಗಾಯತ್ರಿ ರಾಮಣ್ಣ, ಎ. ಶ್ರೀಲತಾ. ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ಚಾಮರಾಜಪೇಟೆ. ಬೆಳಿಗ್ಗೆ 10.30.